


ಸಂಖ್ಯೆಯಲ್ಲಿವೆ. ಬೆಂಗಳೂರಿನಲ್ಲೂ ಆಗಾಗ್ಗೆ ಇವು ಕಣ್ಣಿಗೆ ಬೀಳುತ್ತವೆ. ಇವು ಹೆಚ್ಚು ಮೈಲೇಜ್ ನೀಡುತ್ತಿದ್ದರೂ ಜನಪ್ರಿಯವಾಗದೇ ಉಳಿದದ್ದು ಏಕೆ? ಬಹುಬೇಗನೆ ಮಾರುಕಟ್ಟೆಯಿಂದ ನಿರ್ಗಮಿಸಿದ್ದು ಏಕೆ? ನಿಜಕ್ಕೂ ಈ ಪ್ರಶ್ನೆಗಳು ಕುತೂಹಲ ಕೆರಳಿಸುವಂತಿವೆ. ಈಗ ಮತ್ತೆ ಡೀಸೆಲ್ ಬೈಕ್‌ಗಳು ನಮ್ಮ ರಸ್ತೆಗಿಳಿಯಬಹುದೇ ಎಂಬುದೂ ಬಹುದೊಡ್ಡ ಪ್ರಶ್ನೆ.

## ಪಂಪ್‌ಸೆಟ್ ಎಂಜಿನ್ನಿನ ಬೈಕ್!

ರಾಯಲ್ ಎನ್‌ಫೀಲ್ಡ್ ಮಾರಾಟ ಮಾಡುತ್ತಿದ್ದ ಡೀಸೆಲ್ ಎಂಜಿನ್ ಬೈಕ್‌ಗೆ ಟಾರಸ್ ಎಂದು ಹೆಸರಿಡಲಾಗಿತ್ತು. ಆರಂಭದ ದಿನಗಳಲ್ಲಿ ಇದು ಸಾಮಾನ್ಯ ಬುಲೆಟ್‌ನಂತೆ ಕಪ್ಪು ಬಣ್ಣದಲ್ಲಿ ಲಭ್ಯವಿತ್ತು. ಪೆಟ್ರೋಲ್ ಬುಲೆಟ್‌ಗಿಂತ ಇದು ವಿಶಿಷ್ಟವಾಗಿ ಕಾಣಬೇಕು ಎಂಬ ಉದ್ದೇಶದಿಂದ ಟಾರಸ್ ಬೈಕ್‌ಗೆ ನಂತರದ ದಿನಗಳಲ್ಲಿ ಕಡು ಹಳದಿ ಬಣ್ಣ ನೀಡಲಾಯಿತು. ಆದರೆ ಕಡು ಹಳದಿ ಬಣ್ಣದ ಡೀಸೆಲ್ ಬೈಕ್‌ಗಳು ಈಗ ರಸ್ತೆಯಲ್ಲಿ ಇಲ್ಲವೇ ಇಲ್ಲ ಎನ್ನಬಹುದೇನೊ?

ಆದರೆ ಬಣ್ಣದ ಹೊರತಾಗಿಯೂ ಡೀಸೆಲ್ ಬೈಕ್‌ಗಳು ಜನರ ಗಮನಕ್ಕೆ ಬೇಡವೆಂದರೂ ಬರುತ್ತಿದ್ದವು ಎಂದರೆ ಸುಳ್ಳಾಗದು. ಈ ಬೈಕ್‌ಗಳು ಹೊರಡಿಸುತ್ತಿದ್ದ ಭಾರಿ ಶಬ್ದ ಮತ್ತು ಆಗಾಗ ಉಗುಳುತ್ತಿದ್ದ ಕಪ್ಪು ಹೊಗೆಯೇ ಇದಕ್ಕೆ ಕಾರಣ.

ಅಂದ ಹಾಗೆ, ಈ ಬೈಕ್‌ಗಳಲ್ಲಿ ಇದ್ದದ್ದು, ಬೈಕ್‌ಗಳಿಗೆಂದೇ ಅಭಿವೃದ್ಧಿ ಪಡಿಸಿದ್ದ ಡೀಸೆಲ್ ಎಂಜಿನ್ ಅಲ್ಲ. ಭಾರತದಲ್ಲಿ ಗ್ರೀವ್ಸ್ ಲಾಂಬರ್ಡಿನಿ ಎಂಬ ನೀರಿನ ಪಂಪ್‌ಸೆಟ್ ತಯಾರಿಸುವ ಕಂಪನಿ ವಹಿವಾಟು ನಡೆಸುತ್ತಿದೆ. ಈ ಕಂಪೆನಿಯ ಪೋರ್ಟೆಬಲ್ ಪಂಪ್‌ಸೆಟ್ಟನ್ನೇ ಡೀಸೆಲ್ ಬುಲೆಟ್ ಯಾನೆ ಟಾರಸ್‌ನಲ್ಲಿ ಅಳವಡಿಸಲಾಗಿತ್ತು! ಆದರೆ ಕಾಸ್ಟ್ ಐರನ್ ಪೆಟ್ರೋಲ್ ಎಂಜಿನ್‌ನ ಟ್ರಾನ್ಸ್‌ಮಿಷನ್ (ಗಿಯರ್ ಬಾಕ್ಸ್) ಮಾತ್ರ ಉಳಿಸಿಕೊಳ್ಳಲಾಗಿತ್ತು.

6.5 ಬಿಎಚ್‌ಪಿ ಸಾಮರ್ಥ್ಯದ ಈ ಎಂಜಿನ್, 15 ನ್ಯೂಟನ್ ಮೀಟರ್ ಟಾರ್ಕ್ ಉತ್ಪಾದಿಸುತ್ತಿತ್ತು. 6.5 ಬಿಎಚ್‌ಪಿ ಎಂದರೆ ಇಂದಿನ ಬೈಕ್ ಪ್ರಿಯರಿಗೆ ನಗು ಬರಬಹುದು. ಏಕೆಂದರೆ ನಮ್ಮಲ್ಲಿ ಈಗ ಮಾರುಕಟ್ಟೆಯಲ್ಲಿರುವ 100 ಸಿ.ಸಿ. ಎಂಜಿನ್ ಸಾಮರ್ಥ್ಯದ ಬೈಕ್‌ಗಳೆಲ್ಲವೂ ಕನಿಷ್ಠ 7 ಬಿಎಚ್‌ಪಿ ಶಕ್ತಿ ಉತ್ಪಾದಿಸುತ್ತವೆ. ಇನ್ನು 150 ಸಿ.ಸಿ. ಎಂಜಿನ್ ಇರುವ ಬೈಕ್‌ಗಳು 15 ನ್ಯೂಟನ್ ಮೀಟರ್ ಟಾರ್ಕ್ ಉತ್ಪಾದಿಸುತ್ತವೆ. ಈ ವಿಚಾರದಲ್ಲಿ ಈ ಎಂಜಿನ್ ಅತ್ಯಂತ ದುರ್ಬಲ ಎಂದೇ ಎಲ್ಲರೂ ಊಹಿಸಬಹುದು. ಆದರೆ ಈ ಎಂಜಿನ್ ದುರ್ಬಲ ಅಲ್ಲವೇ ಅಲ್ಲ ಎಂಬುದು ಅದನ್ನು ಚಲಾಯಿಸಿದವರಿಗೆ ಅರಿವಾಗಿರುತ್ತದೆ.



